(ಇಂದು ದಿನಾಂಕಃ 04-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ್.ಎನ.ಬಿ ವಕೀಲರಿಂದ ಃ

1. ತುರಾಬ ಸಾಬರವರ ತಂದೆ ಹೆಸರು ಹುಸೇನಸಾಬ ಇರುತ್ತದೆ. ಹುಸೇನಸಾಬರವರಿಗೆ ಎಷ್ಟು ಗಂಡು ಮಕ್ಕಳು ಮತ್ತು ಎಷ್ಟು ಹೆಣ್ಣು ಮಕ್ಕಳು ಎಂದು ನನಗೆ ಗೊತ್ತಿಲ್ಲ. ಹುಸೇನಸಾಬರವರಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಮಗಳು ಇದ್ದಳು ಎಂದರೆ ಸರಿ. ಹುಸೇನಸಾಬರವರ ಮೊದಲ ಮಗನ ಹೆಸರು ತುರಾಬಸಾಬ, 2 ನೇ ಮಗಳ ಹೆಸರು ಮಾಲಾನಬಿ, 3 ನೆ ಮಗನ ಹೆಸರು ಶರೀಬ ಸಾಬ, 4 ನೇ ಮಗನ ಹೆಸರು ಮೆಹಬೂಬ ಸಾಬ ಅಲಿಯಾಸ ಬಾಷುಮಿಯಾ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಶರೀಬ ಸಾಬರವರಿಗೆ ಇಬ್ಬರು ಮಕ್ಕಳು ಅವರ ಹೆಸರು ನ್ಯಾಮತಸಾಬ ಮತ್ತು ಬೇಗಂಬಿ ಎಂದರೆ ಸರಿ. ನ್ಯಾಮತಸಾಬ ನನ್ನ ತಂದೆ. ನ್ಯಾಮತಸಾಬರವರ ತಂದೆಯ ಹೆಸರು ಶರೀಫಸಾಬ ಎಂದರೆ ಸರಿ. ನ್ಯಾಮತಸಾಬರವರಿಗೆ ಇಬ್ಬರು ಹೆಂಡತಿಯರು ಅವರ ಹೆಸರು ಬಿಪಾಷ್ಯ ಮತ್ತು 2 ನೇ ಹೆಂಡತಿ ಬಿಜಾನಬಿ ಎಂದರೆ ಅವರಿಗೆ ಒಬ್ಬಳೆ ಹೆಂಡತಿ ಇದ್ದಳು ಎಂದು ಹೇಳುತ್ತಾರೆ. ನನ್ನ ತಂದೆಗೆ ಎಷ್ಟು ಹೆಂಡತಿಯರು ಮತ್ತು ಎಷ್ಟು ಮಕ್ಕಳು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ವಂಶಾವಳಿ ಸಲ್ಲಿಸಿಲ್ಲ. ನ್ಯಾಮತಸಾಬರವರ ಬದುಕಿರುವಾಗಲೆ ನನ್ನ ತಾಯಿ ಬಿಪಾಷ್ಯ ಉಸ್ಮಾನ ಅಲಿ ಸಯ್ಯದ ಪಲಿ ಗ್ರಾಮದವರನ್ನು ಮದುವೆ ಆಗಿ ಹೋಗಿರುತ್ತಾರೆ ಎಂದರೆ ಸರಿ. ಬಿಪಾಷ್ಯ ಈಗಲು ಬದುಕಿದ್ದಾರೆ ಎಂದರೆ ಸರಿ. ಉಸ್ಮಾನ ಅಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಬಿಪಾಷ್ಯ 2 ನೇ ಮದುವೆ ಆದ ನಂತರ ನನ್ನ ತಂದೆ ನ್ಯಾಮತಸಾಬರವರು

ಬಿಜಾನಬಿರವರನ್ನು ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಅವರು ಏನು ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಬಿಪಾಷ್ಯರವರಿಗೆ ನಾವು ಇಬ್ಬರು ಮಕ್ಕಳು ಎಂದರೆ ಸರಿ. ಬಿಜಾನಬಿರವರಿಗೆ 6 ಜನ ಮಕ್ಕಳು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಬಿಜಾನಬಿರವರ ಮಕ್ಕಳ ಹೆಸರು ಜಾಫರ, ನಜಿರಾ, ಮೆಹಮುದಾ, ಮುಜಾಹಿದ, ನಸರೀನ ಮತ್ತು ನೂರಜಹಾನ ಎಂದರೆ ನನಗೆ ಗೊತ್ತಿಲ್ಲ. ನ್ಯಾಮತಸಾಬರವರ ತಂದೆಯ ಹೆಸರು ಶರೀಫಸಾಬ ಎಂದು ನಾನು ನನ್ನ ವಾದ ಪತ್ರದಲ್ಲಿ ಬರೆದಿಲ್ಲ.

2. ಹುಸೇನಸಾಬರವರಿಗೆ ಎಷ್ಟು ಜಮೀನು ಇತ್ತು ಎಂದು ನನಗೆ ನೆನಪಿಲ್ಲ. ಹುಸೇನಸಾಬರವರಿಗೆ ಎಷ್ಟು ಜಮೀನು ಇತ್ತು ಎಂದು ನಾನು ನನ್ನ ವಾದ ಪತ್ರದಲ್ಲಿ ಬರೆದಿಲ್ಲ. ನಾನು ನನ್ನ ವಾದ ಪತ್ರದಲ್ಲಿ ಏನು ಬರೆದಿರುತ್ತೇನೆ ಎಂದರೆ ಸಾಕ್ಷಿ ಹೊಲದ ಬಗ್ಗೆ ಬರೆದಿರುತ್ತೇನೆ ಆದರೆ ಏನು ಬರೆದಿರುತ್ತೇನೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಹುಸೇನಸಾಬರವರಿಗೆ ಸರ್ವೆ ನಂಬರ 72 ರಲ್ಲಿ 11 ಎಕರೆ 9 ಗುಂಟೆ ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 72 ರಲ್ಲಿ 11 ಎಕರೆ 9 ಗುಂಟೆ ಜಮೀನಿನಲ್ಲಿ ಶರೀಫಸಾಬರವರಿಗೆ 5 ಎಕರೆ 32 ಗುಂಟೆ ಮತ್ತು ಮೆಹಬೂಬಸಾಬರವರಿಗೆ 5 ಎಕರೆ 17 ಗುಂಟೆ ಜಮೀನು ಬಂದಿತ್ತು ಎಂದರೆ ಸರಿ. ಸರ್ವೆ ನಂಬರ 72 ರಲ್ಲಿ 11 ಎಕರೆ 9 ಗುಂಟೆ ಜಮೀನನ್ನು ಶರೀಫಸಾಬರವರಿಗೆ ಮತ್ತು ಮೆಹಬೂಬಸಾಬರವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ತುರಾಬಸಾಬರವರಿಗೆ ಮಕ್ಕಳಿಲ್ಲದಿದ್ದರಿಂದ ಅವರಿಗೆ ಸರ್ವೆ ನಂಬರ 72 ರಲ್ಲಿ 11 ಎಕರೆ 9 ಗುಂಟೆ ಜಮೀನಿನಲ್ಲಿ ಯಾವುದೇ ಭಾಗ ಕೊಟ್ಟಿಲ್ಲ ಎಂದರೆ ಸರಿ. ಶರೀಬಸಾಬ ತೀರಿಕೊಂಡ ನಂತರ ಸರ್ವೆ ನಂಬರ 72 ರಲ್ಲಿ 5 ಎಕರೆ 32 ಗುಂಟೆ ಜಮೀನು ನ್ಯಾಮತಸಾಬರವರ ಹೆಸರಿಗೆ ಆಯಿತು ಎಂದರೆ ಸರಿ. ನ್ಯಾಮತಸಾಬರವರಿಗೆ ನ್ಯಾಮತ

ಉಲ್ಲಾ ಎಂದು ಕರೆಯುತ್ತಿದ್ದರು ಎಂದರೆ ಸರಿ. ನ್ಯಾಮತಸಾಬರವರ ತೀರಿಕೊಂಡ ನಂತರ ಸರ್ವೆ ನಂಬರ 72 ರಲ್ಲಿ 5 ಎಕರೆ 32 ಗುಂಟೆ ಜಮೀನು ಬಿಜಾನಬಿರವರ ಹೆಸರಿಗೆ ಪಹಣಿ ಆಯಿತು ಎಂದರೆ ನನಗೆ ಗೊತ್ತಿಲ್ಲ. ಬಿಜಾನಬಿರವರು ಬದುಕಿದಾರೊ ಇಲ್ಲವೊ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನ್ಯಾಮತಸಾಬರವರ ಸಹೋದರಿಯಾದ ಬೇಗಂಬಿರವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ. ನ್ಯಾಮತಸಾಬರವರ ತಂದೆಯ ಹೆಸರು ತುರಾಬ ಸಾಬ ಅಲ್ಲಾ ಎಂದರೆ ಸರಿ. ನ್ಯಾಮತಸಾಬರವರ ತಾಯಿಯ ಹೆಸರು ವಲಿಮಾಬಿ ಅಲ್ಲಾ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ತುರಾಬಸಾಬರವರ ಮಗ ನ್ಯಾಮತಸಾಬ ಎಂದು ಬರೆದಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತುರಾಬಸಾಬರವರಿಗೆ ಮಕ್ಕಳಿರಲಿಲ್ಲ ಆದ್ದರಿಂದ ನನ್ನ ತಂದೆಯ ಹೆಸರಿಗೆ

ಮಾಡಿರುತ್ತಾರೆ ಎಂದು ಹೇಳುತ್ತಾರೆ. ತುರಾಬಸಾಬರವರಿಗೆ ಮತ್ತು ವಲಿಮಾಬಿ ರವರಿಗೆ ಮಕ್ಕಳಿಲ್ಲದಿದ್ದರಿಂದ ನನ್ನ ತಂದೆಯನ್ನು ದತ್ತು ತೆಗೆದುಕೊಂಡಿದ್ದರು ಎಂದು ನಾನು ನನ್ನ ವಾದ ಪತ್ರದಲ್ಲಿ ಬರೆದಿರುತ್ತೇನೆ.

3. ದಾವಾ ಆಸ್ತಿ ಸರ್ವೆ ನಂಬರ 175/25 ಮೊದಲು ಸರಕಾರದ ಜಮೀನು ಇತ್ತು ಎಂದರೆ ಸರಿ. ಸರ್ವೆ ನಂಬರ 175 ರಲ್ಲಿ ಯಾರು ವ್ಯವಸಾಯ ಮಾಡುತ್ತಿದ್ದರು ಅವರವರಿಗೆ ಸರಕಾರ ಮಂಜೂರು ಮಾಡಿತ್ತು ಎಂದರೆ ನನಗೆ ಗೊತ್ತಿಲ್ಲ. ಸರಕಾರವು 27 ಜನರಿಗೆ ಸದರಿ ಜಮೀನನ್ನು ಮಂಜೂರು ಮಾಡಿತ್ತು ಅದರಲ್ಲಿ ತುರಾಬಸಾಬರವರಿಗೆ ಮಂಜೂರು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಸಲ್ಲಿಸುವ ಮೊದಲು ನಾನು ತುರಾಬಸಾಬರವರಿಗೆ ದಾವಾ ಆಸ್ತಿ ಹೇಗೆ ಬಂದಿತ್ತು ಎಂದು ವಿಚಾರಿಸಿರುವುದಿಲ್ಲ. ತುರಾಬಸಾಬರವರಿಗೆ ಮಂಜೂರು ಆದ ನಂತರ ಅವರು ತೀರಿಕೊಂಡಿದ್ದು, ಅವರು ತೀರಿಕೊಂಡ ನಂತರ ತುರಾಬಸಾಬರವರ ಹೆಂಡತಿಯಾದ

ವಲಿಮಾಬಿರವರ ಹೆಸರಿಗೆ ಮ್ಯುಟೇಷನ ಆಯಿತು ಎಂದರೆ ಸರಿ. ತುರಾಬಸಾಬರವರಿಗೆ ಮತ್ತು ವಲಿಮಾಬಿರವರಿಗೆ ಮಕ್ಕಳಿಲ್ಲದಿದ್ದರಿಂದ ಅವರನ್ನು ಸಲಿಮಖಾನ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ನ್ಯಾಮತಸಾಬ ಬದುಕಿರುವವರಗೆ ಅವರೇ ನೋಡಿಕೊಂಡರು, ಅವರು ತೀರಿಕೊಂಡ ನಂತರ ಸಲಿಮಖಾನ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ವಲಿಮಾಬಿರವರು ಸಲಿಮಖಾನರವರ ಹೆಸರಿಗೆ ಮೌಖಿಕವಾಗಿ ದಾನ ಮಾಡಿಕೊಟ್ಟಿದ್ದರಿಂದ ದಾವಾ ಆಸ್ತಿ ಸಲಿಮಖಾನರವರ ಹೆಸರಿಗೆ ಮ್ಯುಟೇಷನ ಆಗಿದೆ ಎಂದರೆ ಸರಿ. ದಿಃ 12-06-1988 ರಂದು ಸಲಿಮಖಾನರವರ ಹೆಸರಿಗೆ ಮ್ಯುಟೇಷನ ಆಗಿದೆ ಎಂದರೆ ಸರಿ. ನನ್ನ ತಂದೆ ನ್ಯಾಮತಸಾಬರವರಿಗೆ ಶರೀಬಸಾಬರವರಿಂದ ಬಂದ ಸರ್ವೆ ನಂಬರ 72 ರಲ್ಲಿ 5 ಎಕರೆ 32 ಗುಂಟೆ ಜಮೀನನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ನ್ಯಾಮತಸಾಬರವರ ಇನ್ನೊಬ್ಬ ಹೆಂಡತಿ ಮತ್ತು ಅವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ತುರಾಬಸಾಬ ತೀರಿಕೊಂಡ ನಂತರ ದಾವಾ ಆಸ್ತಿ ನ್ಯಾಮತಸಾಬರವರ ಹೆಸರಿಗೆ ಆಗಿದೆ ಎಂದು ತೋರಿಸಲು ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ದಾವಾ ಆಸ್ತಿಯ ಪ್ರತಿ ಎಕರೆಗೆ ರೂ.2,00,000/-ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮೌಲ್ಯ ಒಟ್ಟು ರೂ.2,00,000/-ಇದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿರುತ್ತೇನೆ. ನನ್ನ ತಂದೆ ದಿಃ 18-10-2022 ರಂದು ತೀರಿಕೊಂಡರು ಎಂದರೆ ಸರಿ. ನ್ಯಾಮತಸಾಬರವರ ಕುಟುಂಬದ ವಂಶಾವಳಿ ಮತ್ತು ಅವರ ಆಧಾರ ಕಾರ್ಡನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ದಾವಾ ಆಸ್ತಿ ಹಿರಿಯರ ಆಸ್ತಿ ಅಲ್ಲ ಎಂದರೆ ಸರಿ. ದಾವಾ ಆಸ್ತಿ ತುರಾಬ ಖಾನರವರಿಗೆ ಸರಕಾರದಿಂದ ಮಂಜೂರಾಗಿತ್ತು ಅದು ತುರಾಬಖಾನ ಮತ್ತು ವಲಿಮಾಬಿರವರ ಸ್ವಂತ ಆಸ್ತಿ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿ

ತುರಾಬ ಖಾನರವರಿಗೆ ಸರಕಾರದಿಂದ ಮಂಜೂರಾಗಿತ್ತು ಆದ್ದರಿಂದ ಸದರಿ ಆಸ್ತಿಯನ್ನು ತುರಾಬಖಾನ ಮತ್ತು ವಲಿಮಾಬಿರವರು ತನ್ನ ಸ್ವಂತ ಇಚ್ಛೆಯಿಂದ ಸಲಿಮಖಾನರವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಸುಳ್ಳು ಬರೆದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಮತಸಾಬರವರ ಜಮೀನಿನಲ್ಲಿ ಹಕ್ಕುದಾರಳಿರುತ್ತೇನೆ ಮತ್ತು ತುರಾಬ ಖಾನರವರ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮೇಹಬೂಬ ಸಾಬರವರು ತಮ್ಮ ಹಿಸ್ಸೆಗೆ ಬಂದ 5 ಎಕರೆ 17 ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಮತಸಾಬರವರ ತಂದೆ ಶರೀಬಸಾಬ ಆಗಿದ್ದರು ಸಹ ನಾನು ನನ್ನ ದಾವೆಯಲ್ಲಿ ನ್ಯಾಮತಸಾಬರವರ ತಂದೆ ತುರಾಬಸಾಬ ಎಂದು ತಪ್ಪು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಂಬಂಧಗಳನ್ನು ತಪ್ಪು ತೋರಿಸಿ ಸುಳ್ಳುದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಹಕ್ಕುದಾರರು ಸಲಿಮಖಾನ ಆಗಿದ್ದರು ಸಹ ನಾನು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.